KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
DEPARTMENT / SUBJECT:
NAME OF THE NEWS PAPER:
DATE: 23/07/2019

# ಶಾಸಕರನ್ನು ಗೆಲ್ಲಿಸಿದ್ದು ಸದನಕ್ಕೆ ಬರಲು: ಸ್ಪೀಕರ್

ವಿಕ ಸುದ್ದಿಲೋಕ ಬೆಂಗಳೂರು

ಅತೃಪ್ತ ಶಾಸಕರ ಗೈರುಹಾಜರಿಯಲ್ಲಿ ಅವರ ಬಗ್ಗೆ ಆಪಾದನೆಯನ್ನು ಆಕ್ಷೇಪಿಸಿದ ಪ್ರತಿಪಕ್ಷ ಸದಸ್ಯರ ವಿರುದ್ಧ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಕೆಂಡಾಮಂಡಲವಾದ ಪ್ರಸಂಗ ವಿಧಾನಸಭೆಯಲ್ಲಿ ಸೋಮವಾರ ನಡೆಯಿತು.

ರಾಜೀನಾಮೆ ನೀಡಿರುವ ಬಿ.ಸಿ. ಪಾಟೀಲ್ ಮತ್ತು ಬಿಜೆಪಿ ನಾಯಕರ ಜತೆಗಿನ ಒಡನಾಟ, ಸಂಭಾಷಣೆಯ ಕುರಿತಂತೆ ಸಚಿವ ಕೃಷ್ಣ ಬೈರೇಗೌಡ ಪ್ರಸ್ತಾಪಿಸಿದಾಗ ಬಿಜೆಪಿಯ ಜಗದೀಶ ಶೆಟ್ಟರ್ ಆಕ್ಷೇಪಿಸಿ, ಸದನದಲ್ಲಿ ಹಾಜರಿಲ್ಲದ ಸದಸ್ಯರ ಬಗ್ಗೆ ಮಾತನಾಡುವುದು ಬೇಜವಾಬ್ದಾರಿ ನಡವಳಿಕೆ ಎಂದು ವಿರೋಧಿಸಿದರು. ಶೆಟ್ಟರ್ ಅವರ ಈ ಆಕ್ಷೇಪದ ವಿರುದ್ಧ ಗುಡುಗಿದ ಸ್ಪೀಕರ್ ''ಜನ ಮತ ಹಾಕಿ ಕಳಿಸಿರುವುದು ಸದನಕ್ಕೆ ಬಂದು ಕೂರಲಿ ಎಂಬ ಉದ್ದೇಶದಿಂದ. ಸದನಕ್ಕೆ ಗೈರು ಹಾಜರಿ ಬಗ್ಗೆಯೂ ನನಗೆ ಮಾಹಿತಿ ನೀಡಿಲ್ಲ. ಸದನಕ್ಕೆ ಬರಬೇಕಾದವರು ಬಂದು ತಮ್ಮನ್ನು ತಾವು ಸಮರ್ಥನೆ ಮಾಡಿಕೊಳ್ಳಲು ಸಿದ್ಧರಿಲ್ಲ. ಇಂತಹ ಶಾಸಕರ ಬಗ್ಗೆ ಸದನದಲ್ಲಿ ಅಲ್ಲದೆ ಬೇರೆಲ್ಲಿ ಚರ್ಚೆ ಮಾಡಬೇಕು. ಗೈರು ಹಾಜರಾಗಿರುವ ಶಾಸಕರ ಬದಲಿಗೆ, ಅವರನ್ನು ಇಷ್ಟಪಟ್ಟು ಆಯ್ಕೆ ಮಾಡಿ ಕಳಿಸಿದ ಜನ ನಿಜಕ್ಕೂ ಅನಾಥರಾಗಿದ್ದಾರೆ'' ಎಂದು ಆಕ್ರೋಶ ವ್ಯಕ್ತಪಡಿಸಿದರು.



ಸದನದಲ್ಲಿ ಕಾಂಗ್ರೆಸ್-ಜೆಡಿಎಸ್ ಶಾಸಕರು ಯಾವುದೇ ರೀತಿಯ ಉದ್ರೇಕಿತ ಭಾಷಣ ಮಾಡಿದರೂ ತಕರಾರು ಎತ್ತದೆ ಮೌನಕ್ಕೆ ಶರಣಾಗಿದ್ದ ಬಿಜೆಪಿ ನಾಯಕರು

ಅತೃಪ್ತ ಶಾಸಕರು ಮತ್ತು ಬಿಜೆಪಿ ನಾಯಕರ ನಡುವಿನ ಸಂಭಾಷಣೆ, ವ್ಯವಹಾರದ ಮಾತುಕತೆ ಕುರಿತಾದ ಮಾತುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ತಮ್ಮ ಕಚೇರಿಗೆ ಸಲ್ಲಿಸುವಂತೆ ಸಚಿವ ಕೃಷ್ಣ ಬೈರೇಗೌಡರಿಗೆ ಸ್ಪೀಕರ್ ಸೂಚಿಸಿದರು. ಆದರೆ, ಪ್ರತಿಪಕ್ಷ ನಾಯಕರ ಆಪ್ತ ಸಹಾಯಕ ಸಂತೋಷ್ ಪಾತ್ರ ಕುರಿತು ಕೃಷ್ಣ ಬೈರೇಗೌಡ ಪ್ರಸ್ತಾಪಕ್ಕೆ ಸ್ಪೀಕರ್ ತಡೆಹಾಕಿದರು. ಮಧ್ಯ ಪ್ರವೇಶಿಸಿದ ಸಚಿವ ಪ್ರಿಯಾಂಕ್ ಖರ್ಗೆ ''ಅತೃಪ್ತ ಶಾಸಕರನ್ನು ಮುಂಬೈಗೆ ಟ್ರಿಪ್ ಮಾಡುತ್ತಿದ್ದ ವಿಶೇಷ ವಿಮಾನ ಬಿಜೆಪಿಯ ರಾಜ್ಯಸಭಾ ಸದಸ್ಯರಿಗೆ ಸೇರಿದ್ದು,'' ಎಂದು ದೂರಿದರು.

''ಇಂತಹ ಎಲ್ಲ ಮಾಹಿತಿಯನ್ನೂ ಹೊರಹಾಕಿ. ಯಾವುದನ್ನೂ ಮುಚ್ಚಿಡಬೇಡಿ. ಸಾರ್ವಜನಿಕರಿಗೆ ಎಲ್ಲವೂ ಗೊತ್ತಾಗಲಿ'' ಎಂದು ಸ್ಪೀಕರ್ ಸೂಚಿಸಿದರು.

**[illegible]**

ಸಚಿವರಾದ ಕೃಷ್ಣಬೈರೇಗೌಡ, ಪ್ರಿಯಾಂಕ್ ಖರ್ಗೆ, ಡಿ.ಕೆ.ಶಿವಕುಮಾರ್ ಅವರು ಅತೃಪ್ತ ಶಾಸಕರ ರಾಜೀನಾಮೆ ವಿಚಾರದಲ್ಲಿ ಬಿಜೆಪಿ ವಿರುದ್ಧ ಆಪಾದನೆಯಲ್ಲಿ ತೊಡಗಿದ್ದಾಗ ಪ್ರತಿಪಕ್ಷದ ಮಾಧುಸ್ವಾಮಿ ತೀವ್ರವಾಗಿ ಆಕ್ಷೇಪಿಸಿದರು. ''ರಾಜೀನಾಮೆ ಕೊಟ್ಟ ನಿಮ್ಮ ಶಾಸಕನ ಕೊರಳು ಪಟ್ಟಿ ಹಿಡಿದು ವಿಧಾನಸೌಧದಲ್ಲೇ ಹೊಡೆದವರು ನೀವು,'' ಎಂದು ಮಾಧುಸ್ವಾಮಿ ಸರಕಾರಕ್ಕೆ ತಿರುಗೇಟು ನೀಡಿದರು. ಮಧ್ಯಪ್ರವೇಶಿಸಿದ ಸ್ಪೀಕರ್ ರಮೇಶ್‌ಕುಮಾರ್ ಘಟನೆಯನ್ನು ಪ್ರಸ್ತಾಪಿಸಿ, ''ಡಾ. ಸುಧಾಕರ್ ಮತ್ತು ಎಂಟಿಬಿ ನಾಗರಾಜ್ ತಮ್ಮನ್ನು ಭೇಟಿ ಮಾಡಿ ರಾಜೀನಾಮೆ ಪತ್ರ ಸಲ್ಲಿಸಿದರು. ನಾನು ಕೊಟ್ಟ ಚಹಾ ಸೇವಿಸಿ ಬೇರೇನೂ ಮಾತನಾಡದೆ ನಿರ್ಗಮಿಸಿದರು. ಹೀಗಿರುವಾಗ ಒಡೆ ಯಾರಿಗೋ ಬಿದ್ದರೆ ನೀವೇಕೆ ಏಕೆ ನೂರು ಕೊಟ್ಟಿರಿ,'' ಎಂದು ಅವರನ್ನು ಸ್ಪೀಕರ್ ಪ್ರಶ್ನಿಸಿದರು.